ಸಾಕ್ಷಿಯನ್ನು ಕರೆಸಿ ದಿನಾಂಕಃ 07-10-2015 ರಂದು ಪ್ರಮಾಣಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃಪ್ರತಿ ವಾದಿ ಪರ ಶ್ರೀ. ಡಿ.ವಿ.ಎಂ ವಕೀಲರಿಂದಃ

ದಾವಾ ಸರ್ವೆ ನಂಬರ್ 36 ಇದರ ಒಟ್ಟು ವಿಸ್ತೀರ್ಣ 5 ಎಕರೆ 36 ಗುಂಟೆ ಎಂದರೆ ಸರಿ. ಅದರಲ್ಲಿ 5 ಗುಂಟೆ ಫೂಟ್ ಕರಾಬ್ ಇರುತ್ತದೆ. ಮೂಲತಃ ಸದರಿ ಸ್ವತ್ತು ಮುನಿಸ್ವಾಮಿಯವರ ಪತ್ನಿ ಗಂಗಮ್ಮನಿಗೆ ಸೇರಿದ್ದು ಎಂದರೆ ಸರಿ. ಸದರಿ ಗಂಗಮ್ಮ 3ನೇ ಪ್ರತಿವಾದಿಯವರ ತಂದೆಯ ಅಕ್ಕ ಎಂದರೆ ಸರಿ. ಗಂಗಮ್ಮನ ತಂದೆಯ ಹೆಸರು ಪಾಪಣ್ಣ ಎಂದರೆ ಸರಿ. ಪಾಪಣ್ಣನವರಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಮೊದಲನೆ ಮಗ ಮುನಿಯಪ್ಪ ಅವರು 3ನೇ ಪ್ರತಿವಾದಿಯ ತಂದೆಯಾಗಿರುತ್ತಾರೆ. ಪಾಪಣ್ಣನ 2ನೇ ಮಗ ವೆಂಕಟಪ್ಪ ಹಾಗೂ 3ನೇ ಮಗ ಚಂಗಪ್ಪ . ಹೆಣ್ಣು ಮಕ್ಕಳ ಹೆಸರು ಕ್ರಮವಾಗಿ ಗಂಗಮ್ಮ ಮತ್ತು ಕೃಷ್ಣಮ್ಮ ಎಂದರೆ ಸರಿ. 4ನೇ ಮಗಳು ಗಂಗಮ್ಮನಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದರೆ ಸರಿ. ಗಂಗಮ್ಮನಿಗೆ ಸೇರಿದ ಸ್ವತ್ತುಗಳೇ ಈ ದಾವೆಯಲ್ಲಿ ಒಳಗೊಂಡಿವೆ ಎಂದರೆ ಸರಿ. ಗಂಗಮ್ಮ ನಿಧನ ಹೊಂದಿ 50 ವರ್ಷಗಳು ಆಗಿವೆ ಎಂದರೆ ಗೊತ್ತಿಲ್ಲ. ಗಂಗಮ್ಮನ ವಾರಸುದಾರರು ಚಂಗಪ್ಪ , ಮುನಿಯಪ್ಪ ಮತ್ತು ವೆಂಕಟಪ್ಪ ಎಂದರೆ ಸರಿ. ಸರ್ವೆ ನಂಬರ್ 36 ದಾವಾ ಸ್ವತ್ತಿಗೆ 3 ಮತ್ತು 4ನೇ ಪ್ರತಿವಾದಿಗಳು ವಾರಸುದಾರರು ಎಂದರೆ ಸುಳ್ಳು. ನಾನು ಸದರಿ ಸ್ವತ್ತನ್ನು ಕೊಂಡುಕೊಂಡಾಗ ಚಂಗಪ್ಪ , ಮುನಿಯಪ್ಪ , 3 ಮತ್ತು 4 ನೇ ಪ್ರತಿವಾದಿಗಳು ವಾರಸುದಾರರಾಗಿದ್ದರು. ವೆಂಕಟಪ್ಪ ಮತ್ತು

ಮುನಿಯಪ್ಪ ರವರು ಈಗ ಬದುಕಿಲ್ಲ. ಮುನಿಯಪ್ಪನ ವಾಸುದಾರರೇ 3ನೇ ಪ್ರತಿವಾದಿ ಎಂದರೆ ಸರಿ. 4ನೇ ಪ್ರತಿವಾದಿಯ ತಂದೆ ಚಂಗಪ್ಪ ಬದುಕಿದ್ದಾರೆ. 4ನೇ ಪ್ರತಿವಾದಿ ಮತ್ತು ಅವರ ತಂದೆ ಜೊತೆಗೂಡಿ ಸರ್ವೆ ನಂಬರ್ 36ರಲ್ಲಿ 1 ಎಕರೆ 1 ಗುಂಟೆ ಜಮೀನನ್ನು 1ನೇ ಪ್ರತಿವಾದಿ ಹೆಸರಿಗೆ ದಿನಾಂಕಃ2-2-2008 ರಂದು ಕ್ರಯ ಪತ್ರದ ಮೂಕ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಸದರಿ ಕ್ರಯ ಪತ್ರಕ್ಕೆ 4ನೇ ಪ್ರತಿವಾದಿಯ ತಂದೆ ಚಂಗಪ್ಪ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎನ್ನುತ್ತಾರೆ. ಮೇಲ್ಕಾಣಿಸಿದ 1.01 ಗುಂಟೆ ಜಮೀನು ಈಗ 1ನೇ ಪ್ರತಿವವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ಮುನಿವೆಂಕಟಪ್ಪ ಎಂದರೆ ಸರಿ. ಪಶ್ಚಿಮಕ್ಕೆ ಅದೇ ಸರ್ವೆ ನಂಬರಿನ ಉಳಿಕೆ ಜಮೀನು ಎಂದರೆ ಸಾಕ್ಷಿಯು ಅಲ್ಲಿ ನನ್ನ ಜಮೀನು ಇದೆ ಎನ್ನುತ್ತಾರೆ. ಉತ್ತರಕ್ಕೆ ಮುನಿವೆಂಕಟರೆಡ್ಡಿ ಎಂದರೆ ಸರಿ. ದಕ್ಷಿಣಕ್ಕೆ 3ನೇ ಪ್ರತಿವಾದಿಯು ಜಮೀನು ಇದೆ ಎಂದರೆ ಸಾಕ್ಷಿಯು ಅಲ್ಲಿ ನನ್ನ ಹಾಗೂ 3ನೇ ಪ್ರತಿವಾದಿಯ ಜಮೀನು ಇರುತ್ತದೆ ಎನ್ನುತ್ತಾರೆ. ಪೂರ್ವಕ್ಕೆ ಇರುವ ಮುನಿವೆಂಕಟಪ್ಪ 1ನೇ ಪ್ರತಿವಾದಿಯ ತಂದೆ ಎಂದರೆ ಸರಿ. ಸದರಿ ಸ್ವತ್ತಲ್ಲಿ ಮಾವಿನ ಕೃಷಿ ಇದೆ ಎಂದರೆ ಸರಿ. 20 ವರ್ಷಗಳಿಂದ ಮಾವಿನ ಗಿಡಗಳನ್ನು ಬೆಳೆಸಲಾಗಿದೆ ಎಂದರೆ ಸಾಕ್ಷಿಯು 5-6 ವರ್ಷಗಳಿಂದ ಇದೆ ಎನ್ನುತ್ತಾರೆ. 1ನೇ ಪ್ರತಿವಾದಿಯು ಜಮೀನನ್ನು ಕೊಂಡುಕೊಂಡಾಗಲೇ ಮಾವಿನ ಕೃಷಿ ಇತ್ತು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಪಹಣಿಗಳು ಆಗಿವೆ ಎಂದರೆ ಸರಿ. ಸದರಿ ಜಮೀನಿನ ಸರ್ವೆ ನಂಬರ್ 36/2 ಎಂದು ಮಾರ್ಪಾಟಾಗಿದೆ ಎಂದರೆ ಸರಿ. 2ನೇ ಪ್ರತಿವಾದಿಯು 10 ಗುಂಟೆ ಜಮೀನನ್ನು ಪಾಪಣ್ಣನವರ ಮಗ ಚಂಗಪ್ಪ ಎಂಬುವವರಿಂದ ದಿನಾಂಕಃ7-3-2007 ರ ಕ್ರಯ ಪತ್ರದ ಮುಖಾಂತರ ಕೊಂಡುಕೊಂಡಿದ್ದಾರೆ ಎಂದರೆ ಸರಿ. ಅದರ ಪೂರ್ವಕ್ಕೆ 3ನೇ ಪ್ರತಿವಾದಿ ಎಂದರೆ ಸರಿ. ಪಶ್ಚಿಮಕ್ಕೆ 1ನೇ ಪ್ರತಿವಾದಿ ಎಂದರೆ ಸರಿ. ಉತ್ತರಕ್ಕೆ ಮುನಿವೆಂಕಟರೆಡ್ಡಿ ಎಂದರೆ ಸರಿ. ದಕ್ಷಿಣಕ್ಕೆ 3ನೇ ಪ್ರತಿವಾದಿ ಎಂದರೆ ಸರಿ. ಸದರಿ 10 ಗುಂಟೆಯಲ್ಲಿಯೂ ಸಹ ಮಾವಿನ ಗಿಡಗಳು ಇವೆ ಎಂದರೆ ಸರಿ. ಸದರಿ ಮಾವಿನ ಗಿಡಗಳಲ್ಲಿ ಫಸಲು ಬರುತ್ತಿವೆ ಎಂದರೆ ಸರಿ. ಅವುಗಳಿಗೆ ಸುಮಾರು 20 ವರ್ಷ ಪ್ರಾಯ ಆಗಿವೆ ಎಂದರೆ ಸಾಕ್ಷಿಯು 5-6 ವರ್ಷಗಳ ವುಂದೆ ಮಾವಿನ ಗಿಡಗಳನ್ನು ನಾಟಿ ಮಾಡಲಾಗಿವೆ ಎನ್ನುತ್ತಾರೆ. 20 ವರ್ಷಗಳಿಂದ ಸದರಿ

ಜಮೀನಿನಲ್ಲಿ ಮಾವಿನ ಗಿಡಗಳನ್ನು ಬೆಳೆಸಲಾಗಿರುವುದು ನನ್ನ ಮಾಹಿತಿಯಲ್ಲಿದೆ ಎಂದರೆ ಸರಿಯಲ್ಲ. 20 ವರ್ಷಗಳಿಂದ 1ನೇ ಪ್ರತಿವಾದಿ ಮತ್ತು ಅವರ ತಂದೆ ಮೇಲ್ಕಂಡ 2 ಜಮೀನುಗಳಲ್ಲಿ ಸ್ವಾಧೀನದಲ್ಲಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸಾಕ್ಷಿಯು ಅವರು ಸ್ವಾಧೀನದಲ್ಲಿ ಇರಲಿಲ್ಲ ಎನ್ನುತ್ತಾರೆ. 3ನೇ ಪ್ರತಿವಾದಿಯ ಸ್ವಾಧೀನದಲ್ಲಿ 37 ಗುಂಟೆ ಜಮೀನು ಮೇಲ್ಕಂಡ ಸರ್ವೆ ನಂಬರ್‌ನಲ್ಲಿ ಇದೆ ಎಂದರೆ ಸರಿ. 30 ವರ್ಷಗಳಿಂದ ಸದರಿ ಜಾಗದಲ್ಲಿ ಮಾವಿನ ಫಸಲು ಇದೆ ಎಂದರೆ ಇಲ್ಲ 4-5 ವರ್ಷಗಳಿಂದ ಇದೆ ಎನ್ನುತ್ತಾರೆ. 37 ಗುಂಟೆ ಜಮೀನಿಗೆ ಪೂರ್ವಕ್ಕೆ 3ನೇ ಪ್ರತಿವಾದಿ ಇದ್ದಾರೆ ಎಂದರೆ ಸಾಕ್ಷಿಯು ವಾಸುದೇವರೆಡ್ಡಿ ಮತ್ತು ಅಮರನಾರಾಯಣರೆಡ್ಡಿ ಇರುತ್ತಾರೆ ಎನ್ನುತ್ತಾರೆ. ಪಶ್ಚಿಮಕ್ಕೆ ಅದೇ ಸರ್ವೆ ನಂರಿನ ಉಳಿಕೆ ಎಂದರೆ ಸಾಕ್ಷಿಯು ಅಲ್ಲಿ ನನ್ನ ಜಮೀನು ಇರುತ್ತದೆ ಎನ್ನುತ್ತಾರೆ. ಉತ್ತರಕ್ಕೆ 1 ಮತ್ತು 2ನೇ ಪ್ರತಿವಾದಿಗಳು ಇದ್ದಾರೆ ಸರಿ. ದಕಿಃಣಕ್ಕೆ ಚಿನ್ನಪ್ಪ ಮತ್ತು ಸುಬ್ರಮಣಿ ಇದ್ದಾರೆ ಎಂದರೆ ಅವರ ಜೊತೆಗೆ ನಅಲ್ಲಿ ನಾನೂ ಇದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. 37 ಗುಂಟೆ ಜಮೀನಿನ ದಕ್ಷಿಣಕ್ಕೆ ಇರುವ 20 ಗುಂಟೆ ಜಮೀನನ್ನು 4ನೇ ಪ್ರತಿವಾದಿ ಮತ್ತು ಅವರ ತಂದೆ ಸೇರಿ 20-11-2008 ರಂದು ಕರಾರು ಪತ್ರ ಮೂಲಕ 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 3ನೇ ಪ್ರತಿವಾದಿಯು ಕರಾರು ಪತ್ರದ ಮೂಲಕ ಸದರಿ 230 ಗುಂಟೆ ಜಮೀನನ್ನು ಕೊಂಡುಕೊಂಡ ನಂತರ ಅಲ್ಲಿ ಮಾವಿನ ಗಿಡಗಳನ್ನು ಬೆಳೆಸಿದ್ದಾರೆ ಎಂದರೆ ಸಾಕ್ಷಿಯು ಅಲ್ಲಿ 16 ಗುಂಟೆ ಜಮೀನು ಮಾತ್ರ ಇದ್ದು ಅರದಲ್ಲಿ 4ನೇ ಪ್ರತಿವಾದಿ ಮತ್ತು ಅವರ ತಂದೆ ಬೆಳಸಿದ ಮಾವಿನ ಗಿಡಗಳು ಇರುತ್ತವೆ, ಹಾಗೂ ಅದು 3ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತದೆ ಎನ್ನುತ್ತಾರೆ. ಅಲ್ಲಿರುವ ಮಾವಿನ ಗಿಡಗಳಿಗೆ 20 ವರ್ಷಗಳ ಪ್ರಾಯ ಇದೆ ಎಂದರೆ 5-6 ವರ್ಷಗಳಿಂದ ಗಿಡಗಳನ್ನು ಬೆಳೆಸಿರುತ್ತಾರೆ ಎನ್ನುತ್ತಾರೆ. ಸದರಿ ಜಮೀನಿನ ಪೂರ್ವಕ್ಕೆ 3ನೇ ಪ್ರತಿವಾದಿ ಎಂದರೆ ಸರಿ. ಪಶ್ಚಿಮಕ್ಕೆ ಅದೇ ಸರ್ವೆ ನಂಬರಿನ ಉಳಿಕೆ ಜಮೀನು ಎಂದರೆ ಸಾಕ್ಷಿಯು ಅದು ನನ್ನ ಜಮೀನು. ಉತ್ತರಕ್ಕೆ 3ನೇ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ದಕ್ಷಿಣಕ್ಕೆ ಶಿವನ ರಾಮಚಂದ್ರಪ್ಪನ ಜಮೀನು ಎಂದರೆ ಸರಿ. ಮೇಲ್ಕಂಡ ಚೆಕ್ಕುಬಂದಿಯಲ್ಲಿರುವ ಜಮೀನು 3ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಗೊತ್ತಿಲ್ಲ.

ಈ ದಾವೆಯನ್ನು 30 ಗುಂಟೆ ಜಮೀನಿನ ಮೇಲೆ ಸ್ವಾಧೀನ ಕೇಳಿ ಹೂಡಿರುತ್ತೇನೆ. ಸದರಿ ಸ್ವತ್ತನ್ನು ಸರ್ವೆ ಮಾಡಿಸಿರುತ್ತೇನೆ. ದಾವಾ ಸ್ವತ್ತು ನಿಖರವಾಗಿ ಇಲ್ಲಿ ಬರುತ್ತದೆ ಎಂಬುದರ ಬಗ್ಗೆ

ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು ನ್ಯಾಯಾಲಯಕ್ಕೆ ಮೇಲೆ ಹೇಳಿದ 30 ಗುಂಟೆ ಜಮೀನಿನ ಸಂಬಂದ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು 12 ವರ್ಷಗಳಿಗೂ ಮೇಲ್ಪಟ್ಟು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವ ವಿಚಾರ ನನಗೆ ಗೊತ್ತಿದ್ದು ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ . 12 ವರ್ಷಗಳಿಗೂ ಮೇಲ್ಪಟ್ಟು ದಾವಾ ಸ್ವತ್ತಿನಲ್ಲಿ ಮಾವಿನ ಗಿಡಗಳು ಇರುವ ವಿಚಾರ ನನಗೆ ಗೊತ್ತಿದ್ದೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ದೊಡ್ಡ ದೊಡ್ಡ ಮಾವಿನ ಗಿಡಗಳು ಇವೆ ಎಂದರೆ ಅವರು ದೊಡ್ಡ ಗಿಡಗಳನ್ನೇ ನಾಟಿರುತ್ತಾರೆ ಎನ್ನುತ್ತಾರೆ. 5-6 ವರ್ಷಗಳಿಂದ ಮಾವಿನ ಫಸಲು ಬರುತ್ತಿವೆ ಎಂದರೆ 2 ವರ್ಷಗಳಿಂದ ಫಸಲು ಬರುತ್ತಿವೆ ಎನ್ನುತ್ತಾರೆ. ಮಾವು ಫಸಲು ಕೊಡಲು ಕನಿಷ್ಟ 10 ವರ್ಷಗಳು ಬೇಕು ಎಂದರೆ 2 ವರ್ಷಗಳಲ್ಲಿ ಫಸಲು ಬರುತ್ತವೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಲಾಗಿರುವ 28-1-1976 , 17-5-1976 ಹಾಗೂ 3-11-1976 ಕ್ರಯ ಪತ್ರಗಳನ್ನು ಈ ದಾವೆಗೋಸ್ಕರ ಸೃಷ್ಟಿ ಮಡಿಕೊಳಳಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾನು ಖರೀದಿ ಮಾಡಿಲ್ಲ ಹಾಗೂ ಅದರ ಸ್ವಾಧೀನದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರಕ್ಕೆ ಅಡಕವಾಗಿರುವ 3 ಎಕರೆ 10 ಗುಂಟೆಯಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದರೆ ಸುಳ್ಳು. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸಂಪೂರ್ಣ ಸುಳ್ಳು ಸಂಗತಿಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳಲ್ಲಿ ಯಾವುದೇ ಮಾವಿನ ಗಿಡಗಳನ್ನು ನಾಟಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸ್ವತ್ತನ್ನು ಯಾವತ್ತು ಸರ್ವೆ ಮಾಡಿಸಿಲ್ಲ ಎಂದರೆ ಸರಿಯಲ್ಲ. 25-11-2011 ರಂದು ನಾನು ಪ್ರತಿವಾದಿಗಳಲ್ಲಿ ನಾನು ಸ್ವಾಧೀನವನ್ನು ಕೇಳಿಲ್ಲ ಹಾಗೂ ಸರ್ವೆ ಮಾಡಿಸಿಲ್ಲ ಎಂದರೆ ಸರಿಯಲ್ಲ. 20-6-2013 ರಂದು ದಾವಾ ಸ್ವತ್ತಿನ ಸ್ವಾಧೀನದ ವಿಚಾರದಲ್ಲಿ ಊರಿನಲ್ಲಿ ಪಂಚಾಯಿತಿ ಮಾಡಿಸಿಲ್ಲ ಎಂದರೆ ಸುಳ್ಳು. ಯಾವುದೇ ವ್ಯಾಜ್ಯ ಕಾರಣಗಳು ಇಲ್ಲದಿದ್ದರೂ ಸಹ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 28 ರ ಪ್ರಕಾರ 3ನೇ ಪ್ರತಿವಾದಿಯ ಹೆಸರಿಗೆ 37 ಗುಂಟೆ ಜಮೀನು ಇದೆ ಎಂದರೆ ಸರಿ. ನಿಪಿ 29 ರ ಪ್ರಕಾರ 1ನೇ ಪ್ರತಿವಾದಿಯ ಹೆಸರಿಗೆ 1 ಎಕರೆ 1 ಗುಂಟೆ ಜಮೀನು ಇದೆ ಎಂದರೆ ಸರಿ. ನಿಪಿ 1 ರಿಂದ 27 ರವರೆಗಿನ ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓಹೇಕೇ ಸರಿಯಿದೆ

(ಶಫೀರ್.ಎ.ಎ.)
ಹೆಚ್ಚುವರಿ ಸಿಜೆ ಮತ್ತು ಜೆಎಂಎಫ್‌ಸಿ
ಮುಳಬಾಗಿಲು.